ಕನ್ನಡಪ್ರಭ
ಸೋಮವಾರ 4.05.2026

ಗರಿಷ್ಠ 35°C | ಕನಿಷ್ಠ 24°C

ಸುದ್ದಿ ಸಿಂಚನ

ಪೌರಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ಮೈಕಲ್ ಫರ್ನಾಂಡೀಸ್ ಆಯ್ಕೆ



ದಾಂಡೇಲಿ: ನಗರಸಭೆಯ ಲೆಕ್ಕಾಧಿಕಾರಿ ಮೈಕಲ್ ಫರ್ನಾಂಡೀಸ್ ಅವರು ಪೌರಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ಪುನರಾಯ್ಕೆ ಆಗಿದ್ದಾರೆ. ದಾಂಡೇಲಿ ನಗರಸಭೆಯಲ್ಲಿ ಶನಿವಾರ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಮೈಕಲ್ ಫರ್ನಾಂಡೀಸ್ 45 ಮತಗಳಲ್ಲಿ 41 ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿದರು. ಮೈಕಲ್ ಫರ್ನಾಂಡೀಸ್ ಅವರು ಕಳೆದ 16 ವರ್ಷಗಳಿಂದ ನಿರಂತರವಾಗಿ ಪೌರಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗುತ್ತ, ಕ್ರಿಯಾಶೀಲವಾಗಿ ಕೆಲಸ ಮಾಡುತ್ತ ಬಂದಿದ್ದಾರೆ. ಅವರ ಈ ಆಯ್ಕೆಗೆ ಪೌರಾಯುಕ್ತ ವಿವೇಕ ಬನ್ನೆ ಮತ್ತು ಎಲ್ಲ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸಾಮರಸ್ಯದ ಬದುಕು ಭಾರತೀಯ ಸಂಸ್ಕೃತಿಯ ತಿರುಳು

ಹೊನ್ನಾವರ: ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಹುತ್ವದ ಪರಿಕಲ್ಪನೆ ಇದೆ. ಸಂಗೀತ, ನೃತ್ಯ ಸೇರಿದಂತೆ ವಿವಿಧ ಕಲಾಪ್ರಕಾರಗಳು ಇಲ್ಲಿ ಹಾಸುಹೊಕ್ಕಾಗಿದ್ದು, ನಮ್ಮ ಸಂಸ್ಕೃತಿಯ ತಿರುಳಾದ ಸಾಮರಸ್ಯದ ಬದುಕಿನಲ್ಲಿ ನೆಮ್ಮದಿ ಇದೆ ಎಂದು ಅಳ್ಳಂಕಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ, ಸಾಹಿತಿ ಡಾ. ಜಿ.ಎಸ್. ಹೆಗಡೆ ಹಡಿನಬಾಳ ಅಭಿಪ್ರಾಯಪಟ್ಟರು.ಇಲ್ಲಿಯ ಎಸ್.ಡಿ.ಎಂ. ಪದವಿಕಾಲೇಜಿನ ವಿದ್ಯಾರ್ಥಿ ಒಕ್ಕೂಟದ ಸಹಯೋಗದಲ್ಲಿ ನಡೆದ ಸಾಂಸ್ಕೃತಿಕ ದಿನಾಚರಣೆಯಲ್ಲಿ ಮಾತನಾಡಿದರು. ಎಸ್.ಡಿ.ಎಂ. ಪದವಿ ಕಾಲೇಜಿನಲ್ಲಿ ಕಲಿತು ಮುಂದೆ ಕನ್ನಡ ವಿಷಯದಲ್ಲಿ ಬಿ.ಇಡಿ. ಅಥವಾ ಎಂ.ಎ. ಮಾಡುವ ಎರಡು ವಿದ್ಯಾರ್ಥಿಗಳಿಗೆ ಪ್ರತಿವರ್ಷ ಶಿಷ್ಯವೇತನ ನೀಡುತ್ತೇನೆ ಎಂದು ಅವರು ತಿಳಿಸಿದರು. ಪ್ರಾಚಾರ್ಯ ಡಾ. ಜಿ.ಎನ್. ಭಟ್ಟ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕ್ರೀಡಾ ವಿಭಾಗದ ಸಲಹೆಗಾರ ಆರ್.ಕೆ. ಮೇಸ್ತ, ವಿದ್ಯಾರ್ಥಿ ಕಾರ್ಯದರ್ಶಿ ಕಾರ್ತಿಕ ಗೌಡ, ಎಚ್. ಮನೋಜ, ವೆಂಕಟೇಶ ಭಟ್ ಭಾಗವಹಿಸಿದ್ದರು. ಡಾ. ಎಂ.ಜಿ. ಹೆಗಡೆ ಸ್ವಾಗತಿಸಿದರು. ಉಪನ್ಯಾಸಕ ಮಂಜುನಾಥ ಭಂಡಾರಿ. ಕೆ.ಆರ್. ಶ್ರೀಲತಾ ನಿರೂಪಿಸಿದರು. ಡಾ. ಸುರೇಶ ಎಸ್. ವಂದಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ಸಮೂಹ ಗಾಯನ ಮುದ ನೀಡಿತು.

ತೆಂಗಿನ ಮರದಿಂದ ಬಿದ್ದು ವ್ಯಕ್ತಿ ಸಾವು

ಹೊನ್ನಾವರ: ತಾಲೂಕಿನ ಹೊಸಾಕುಳಿ ಗ್ರಾಮದ ದೊಡ್ಡಹಿತ್ತಲ್ ನಿವಾಸಿ ಶ್ರೀಪಾದ ನಾಯ್ಕ (52) ಶನಿವಾರ ಮಧ್ಯಾಹ್ನ ತೆಂಗಿನ ಮರದಿಂದ ಆಯ ತಪ್ಪಿ ಬಿದ್ದು ಮೃತಪಟ್ಟಿದ್ದಾರೆ. ಮನೆಯ ಸಮೀಪದಲ್ಲೆ ತೆಂಗಿನ ಮರದಿಂದ ಕಾಯಿ ಕೊಯ್ಯುವಾಗ ಆಯತಪ್ಪಿ ಬಿದ್ದು ಗಂಭೀರ ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ಸಾಗಿಸುವಾಗಲೇ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಕವಲಕ್ಕಿಯಲ್ಲಿ ಅಯ್ಯಪ್ಪ ಸನ್ನಿಧಾನದಲ್ಲಿ ಗುರುಸ್ವಾಮಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಗ್ರಾಮಾಭಿವೃದ್ಧಿ ಯೋಜನೆಯ ಶೌರ್ಯ ವಿಪತ್ತು ದಳ, ಒಕ್ಕೂಟದ ಪದಾಧಿಕಾರಿಯಾಗಿ ವಿವಿಧ ಸಂಘಟನೆಯ ಸದಸ್ಯರಾಗಿ ಜನಮನ್ನಣೆ ಪಡೆದಿದ್ದರು. ಮೃತರಿಗೆ ಪತ್ನಿ, ಪುತ್ರಿ, ಪುತ್ರ ಹಾಗೂ ಅಪಾರ ಬಂಧುಗಳಿದ್ದಾರೆ. ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹೊನ್ನಾವರದ ಎಸ್‌ಡಿಎಂ ಪದವಿ ಕಾಲೇಜಿನ ವಿದ್ಯಾರ್ಥಿ ಒಕ್ಕೂಟದ ಸಹಯೋಗದಲ್ಲಿ ನಡೆದ ಸಾಂಸ್ಕೃತಿಕ ದಿನಾಚರಣೆಯಲ್ಲಿ ಸಾಹಿತಿ ಡಾ. ಜಿ.ಎಸ್. ಹೆಗಡೆ ಹಡಿನಬಾಳ ಮಾತನಾಡಿದರು. ಪ್ರಾಚಾರ್ಯ ಡಾ. ಜಿ.ಎನ್. ಭಟ್ಟ, ಆರ್.ಕೆ. ಮೇಸ್ತ ಮತ್ತಿತರರು ಇದ್ದರು.



ಯಲ್ಲಾಪುರ ಪಟ್ಟಣದ ಮದ್ಗುಣಿ ಕಾಂಪ್ಲೆಕ್ಸ್ ಆವಾರದಲ್ಲಿ ಹಿರಿಯ ಕಲಾವಿದೆ ಭಾರತಿ ದಾವಣಗೆರೆ ಅವರ ಮಗಳ ಮದುವೆಯ ಸಹಾಯಾರ್ಥ ಇಟಗಿ ಶ್ರೀ ಗುರು ಕಾಂತೇಶ್ವರ ಸಂಘ ಹಮ್ಮಿಕೊಂಡಿದ್ದ ಬಸ್ ಕಂಡಕ್ಟರ್ ನಾಟಕ ಪ್ರದರ್ಶನವನ್ನು ಉದ್ಯಮಿ ಬಾಲಕೃಷ್ಣ ನಾಯಕ ಉದ್ಘಾಟಿಸಿದರು.

ಗಾಂಜಾ ಸೇವನೆ ಪ್ರಕರಣ: ನ್ಯಾಯಾಲಯದಲ್ಲಿ ಖುಲಾಸೆ

• **ಕನ್ನಡಪ್ರಭ ವಾರ್ತೆ** ಗೋಕರ್ಣ

ಗಾಂಜಾ ಸೇವನೆಯ ಕುರಿತು ಕಳೆದ ವರ್ಷ ದಾಖಲಾದ ಪ್ರಕರಣ ನ್ಯಾಯಾಲಯದಲ್ಲಿ ಖುಲಾಸೆಗೊಂಡಿದೆ. 2024ರಲ್ಲಿ ಹೊರ ರಾಜ್ಯದ ನಾಲ್ಕು ಪ್ರವಾಸಿಗರು ಮುಖ್ಯ ಕಡಲತೀರದ ರೆಸಾರ್ಟ್ ಒಂದರಲ್ಲಿ ವಾಸ್ತವ್ಯವಿದ್ದಾಗ ಪೊಲೀಸರು ದಾಳಿ ನಡೆಸಿ ವಶಕ್ಕೆ ಪಡೆದು ಮಾದಕ ವಸ್ತು ಸೇವನೆಯ ಬಗ್ಗೆ ಪರೀಕ್ಷೆ ಒಳಪಡಿಸಿ ದೂರ ದಾಖಲಿಸಿದ್ದರು. ಈ ಕುರಿತು ಕುಮಟಾ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಮೇ 2ರಂದು ತೀರ್ಪು ಹೊರಬಂದಿದೆ.

ಆರೋಪಿತರಾಗಿದ್ದ ಸೌರಭಕುಮಾರ ಶರ್ಮಾ, ಪಲ್ಲಿವಿಕಾಸ, ರಾಮಕೃಷ್ಣಬಾಬು, ವಿನಯಾ ಶೇಖರ ಎಂಬುವವರು ನಿರ್ದೋಷಿಗಳು ಎಂದು ಆದೇಶಿಸಿದೆ. ಮಾದಕ ವಸ್ತು ಬಳಕೆ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಖಲಾಸೆಗೊಂಡ ಮೊದಲ ಪ್ರಕರಣ ಇದು ಎನ್ನಲಾಗಿದೆ. ಆರೋಪಿತರ ಪರ ನ್ಯಾಯವಾದಿ ರಂಜನ ನಾಯಕ ನಾಡುಮಾಸ್ಕೇರಿ ವಾದ ಮಂಡಿಸಿದ್ದರು.

ಕುಶಲಕರ್ಮಿಗಳು ವಿಶ್ವಾಸಪೂರ್ಣ ಕೆಲಸ ಮಾಡಲಿ: ಕೋಣೆಮನೆ

ಕುಶಲಕಾರ್ಮಿಕರ ದಿನಾಚರಣೆ | ಕುಶಲಗಾರರಿಗೆ ಸಮಾಜದಲ್ಲಿ ಬೇಡಿಕೆ ಹೆಚ್ಚಿದೆ



ಕಾರ್ಯಕ್ರಮದಲ್ಲಿ ಕುಶಲಕರ್ಮಿಗಳನ್ನು ಸನ್ಮಾನಿಸಲಾಯಿತು.

> ಇಂದು ಕೆಲಸಗಾರರು ಇದ್ದು, ಆದರೆ, ಕೌಶಲ್ಯಪೂರ್ಣವಾಗಿ ಕೆಲಸ ಮಾಡುವವರು ವಿರಳವಾಗಿದ್ದಾರೆ. ಗುಣಮಟ್ಟದ ಕೆಲಸ ಮಾಡುವ ಕುಶಲಗಾರರಿಗೆ ಸಮಾಜದಲ್ಲಿ ಬೇಡಿಕೆ ಹೆಚ್ಚಿದೆ.
>
> • **ಹರಿಪ್ರಕಾಶ ಕೋಣೆಮನೆ**
> ವಿಶ್ವದರ್ಶನ ಶಿಕ್ಷಣ ಸಂಸ್ಥೆ ಅಧ್ಯಕ್ಷ

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ತಾಲೂಕಿನತೇಲಂಗಾರಮೈತ್ರಿ ಕಲಾಬಳಗದವತಿಯಿಂದ ಮೈತ್ರಿ ಸಭಾಭವನದಲ್ಲಿ ಕುಶಲಕಾರ್ಮಿಕರ ದಿನಾಚರಣೆ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ವಿಶ್ವದರ್ಶನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಮಾತನಾಡಿ, 'ಶ್ರದ್ಧೆಯಿಂದ ಕೆಲಸ ಮಾಡಿದರೆ ಗೌರವ, ಮಾನಸಿಕ ನೆಮ್ಮದಿ ಸಿಗುತ್ತದೆ ಎನ್ನುವುದಕ್ಕೆ ಸಮಾಜದಲ್ಲಿ ಉಪೇಕ್ಷೆಗೆ ಒಳಗಾದ ಕುಶಲಕರ್ಮಿಗಳನ್ನು ಮುಖ್ಯವಾಹಿನಿಗೆ ತಂದು ಗೌರವಿಸಿರುವುದು ನಿದರ್ಶನ. ಇಂದು ಕೆಲಸಗಾರರು ಇದ್ದು, ಆದರೆ, ಕೌಶಲ್ಯಪೂರ್ಣವಾಗಿ ಕೆಲಸ ಮಾಡುವವರು ವಿರಳವಾಗಿದ್ದಾರೆ. ಗುಣಮಟ್ಟದ ಕೆಲಸ ಮಾಡುವ ಕುಶಲಗಾರರಿಗೆ ಸಮಾಜದಲ್ಲಿ ಬೇಡಿಕೆ ಹೆಚ್ಚಿದೆ ಎಂದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಆರ್.ಎಸ್. ಭಟ್ ಮಾತನ್ನಾಡಿ, ಉದ್ಯೋಗ ಅರಸಿ ಬೇರೆಡೆ ಹೋಗುವ ಬದಲು ಸ್ಥಳೀಯ ಕುಶಲಕರ್ಮಿಗಳು ಸ್ಥಳಿಯವಾಗಿಯೇ ವಿಶ್ವಾಸಪೂರ್ಣವಾಗಿ ಕೆಲಸ ಮಾಡುವ ಮೂಲಕ ಜನರ ಪ್ರೀತಿಗೆ ಪಾತ್ರರಾಗಬೇಕು ಎಂದರು.

ಸರ್ವೋದಯ ಶಿಕ್ಷಣ ಸಮಿತಿ ಉಪಾಧ್ಯಕ್ಷ ಟಿ.ಸಿ. ಗಾಂವ್ಕರ ಮಾತನಾಡಿ, ಹಣದ ಹಿಂದೆ ಬಿದ್ದು, ಅಪ್ರಮಾಣಿಕತೆ ರಾರಾಜಿಸುತ್ತಿರುವ ಸಂದರ್ಭದಲ್ಲಿ ಪ್ರಾಮಾಣಿಕ ಕೆಲಸಗಾರರಿಗೆ ಯಾವಾಗಲೂ ಬೇಡಿಕೆ ಇದ್ದೇ ಇದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಾಯ ಬಿದ್ರೆಮನೆ ಮಾತನ್ನಾಡಿ, ನಾವೊಬ್ಬರೆ ಬದುಕಿದರೆ ಸಾಲದು, ಅಸಹಾಯಕರಿಗೆ ನೆರವಾಗುವ ಮೂಲಕ ಬದುಕಿಸಿ ಬಾಳುವ ಧ್ಯೇಯ ನಮ್ಮದಾಗಬೇಕು ಎಂದರು.

ವಜ್ರಳ್ಳಿ ಸೊಸೈಟಿ ಅಧ್ಯಕ್ಷ ದತ್ತಾತ್ರಯ ಭಟ್ಟ ತಾರಗಾರ, ಗ್ರಾಪಂ ನಿಕಟಪೂರ್ವ ಅಧ್ಯಕ್ಷ ಭಗೀರಥ ನಾಯ್ಕ ಮಾತನಾಡಿದರು.

ಮೈತ್ರಿ ಕಲಾಬಳಗದ ಅಧ್ಯಕ್ಷ ಗಣಪತಿ ಕಂಚಿಪಾಲ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ಥಳೀಯ ಕುಶಲ ಕಾರ್ಮಿಕರನ್ನು ಪ್ರೋತ್ಸಾಹಿಸುವ ಮೂಲಕ ಕಾರ್ಮಿಕರ ವಲಸೆ ತಡೆಯುವ ಹಾಗೂ ಸ್ಥಳಿಯವಾಗಿಯೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅವರನ್ನು, ಗುರುತಿಸಿ ಗೌರವಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಕುಶಲಕರ್ಮಿಗಳಾದ ಗಿರೀಶ ಭಟ್ಟ ವಜ್ರಳ್ಳಿ, ನಾರಾಯಣ ಅಚಾರಿ, ನಾರಾಯಣ ಸರಲೆಗುಡ್ಡೆ, ತಮ್ಮಣ್ಣ ಹೊನ್ನೆಮನೆ, ಜನಾರ್ದನ ಅಂಬ್ಗೆಮನೆ, ವಿಷ್ಣು ಜಾಂಬಳಿಬೇಣ, ಅರುಣ ಪರ್ತನಜಡ್ಡಿ, ಗಣೇಶ ಗೌಡ, ಗಿರೀಶ ವಡ್ಡರ್, ತಾರಾಕಾಂತ ಆಗೇರ, ಕೃಷ್ಣಾನಂದ ಸೂರ್ಲಮಕ್ಕಿ, ನಾಗರಾಜ ದೇಸಾಯಿ, ದಿಗಂಬರ ಬಂಡಾರಿ, ವಿಠ್ಠಲ್ ಗೌಡ ಕೊಂಬೆಮೂಲೆ, ಮಂಗಲಾ ನಾಯ್ಕ, ವೆಂಕಟೇಶ ಶೇಟ್ ಚಿಮನಳ್ಳಿ, ಪೊಕ್ಕ ಗೌಡ, ವೆಂಕಟ್ರಮಣ ಭಟ್ಟ, ನಾಗರಾಜ ಹಲಜಡ್ಡಿ, ಗಣೇಶ ಮರಾಮಕ್ಕಿ, ಗುಲಾಬಿ ಗೌಡ, ಸಂತಾನ್ ಫರ್ನಾಂಡೀಸ್, ಸದಾನಂದ ಮಹಾಲೆ, ರಾಘವೇಂದ್ರ ಬಾಳೆಜಡ್ಡಿ ಅವರನ್ನು ಗೌರವಿಸಲಾಯಿತು.

ಬಳಗದ ಪ್ರಮುಖರಾದ ಸತ್ಯನಾರಾಯಣ ಚಿಮನಳ್ಳಿ ಸ್ವಾಗತಿಸಿದರು. ನಾರಾಯಣ ಗಾಂವ್ಕರ ಗೋಡೆಪಾಲ ಪ್ರಾಸ್ತಾವಿಕ ಮಾತನಾಡಿದರು. ಮಂಜುನಾಥ ಮೂಲೆಮನೆ ನಿರೂಪಿಸಿದರು. ಜಿ.ಎನ್. ಅರುಣಕುಮಾರ, ವಿಶ್ವನಾಥ ಗಾಂವ್ಕರ, ಗಣೇಶ ಭಟ್ಟ, ನಾಗರಾಜ ಹೆಗಡೆ ಪರಿಚಯಿಸಿದರು. ತಿಮ್ಮಣ್ಣ ಭಟ್ಟ ಮತ್ತಿಹಕ್ಕಲು ವಂದಿಸಿದರು. ಕಾರ್ಯಕ್ರಮದಲ್ಲಿ ಕುಶಲಕರ್ಮಿಗಳನ್ನು ಸನ್ಮಾನಿಸಲಾಯಿತು.

ಅಮೃತ್ ಯೋಜನೆಯಿಂದ ನೀರಿನ ಸಮಸ್ಯೆಗೆ ಪರಿಹಾರ

ನೀರು ಸರಬರಾಜು ಕಾಮಗಾರಿಗೆ ಸಚಿವ ಮಂಕಾಳ ಶಂಕುಸ್ಥಾಪನೆ



ಹೊನ್ನಾವರ ತಾಲೂಕಿನ ಮಂಕಿಯಲ್ಲಿ ನೀರು ಸರಬರಾಜು ಯೋಜನೆಯ ಶಂಕುಸ್ಥಾಪನೆಯನ್ನು ಸಚಿವ ಮಂಕಾಳ ವೈದ್ಯ ನೆರವೇರಿಸಿದರು.

• **ಕನ್ನಡಪ್ರಭ ವಾರ್ತೆ** ಹೊನ್ನಾವರ

ಅಮೃತ್ ನೀರಾವರಿ ಯೋಜನೆಯಿಂದ ಮಂಕಿ ಪಟ್ಟಣದಲ್ಲಿ ನೀರಿನ ಅಭಾವಕ್ಕೆ ಪರಿಹಾರ ದೊರೆತಿದೆ. ವಿರೋಧ ಪಕ್ಷದವರು ಜನರ ದಿಕ್ಕು ತಪ್ಪಿಸಲು ಟೀಕೆ ಮಾಡುತ್ತಾರೆ ಎಂದು ಸಚಿವ ಮಂಕಾಳ ವೈದ್ಯ ಹೇಳಿದರು.

ತಾಲೂಕಿನ ಮಂಕಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಮಂಕಿ ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಶರಾವತಿ ಜಲಮೂಲದಿಂದ ಮಂಕಿ ಪಟ್ಟಣಕ್ಕೆನೀರುಸರಬರಾಜು ಯೋಜನೆಯ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಮಂಕಿ ಪಟ್ಟಣ ಪಂಚಾಯಿತಿಗೆ ಎಲ್ಲರಿಗೂ ನೀರು ದೊರಕಿಸಲು ₹106 ಕೋಟಿ ಅಂದಾಜು ವೆಚ್ಚದ ಕಾಮಗಾರಿಗೆ ಅನುದಾನ ತರಲಾಗಿದೆ. ಬಿಜೆಪಿಯವರಿಗೆ ಒಂದು ಇಂದಿರಾ ಕ್ಯಾಂಟೀನ್ ಮಾಡಲೂ ಯೋಗ್ಯತೆಯಿಲ್ಲವಾಗಿತ್ತು. ನಾವು ಮಾಡಿದ್ದೇವೆ. ಏನಾದರೂ ಹೇಳಿ ಜನರ ದಿಕ್ಕುತಪ್ಪಿಸುವ ಕೆಲಸವನ್ನು ಮಾಡಬಾರದು. ಈ ಕಾಮಗಾರಿ ಕೇಂದ್ರ ಸರ್ಕಾರದ ಅನುದಾನದ್ದು ಎಂದು ಹೇಳುತ್ತಾರೆ. ಆದರೆ, ಇದರಲ್ಲಿ ಶೇ 50 ಮಾತ್ರ ಕೇಂದ್ರ ಸರ್ಕಾರದ್ದು. ಶೇ. 40 ರಾಜ್ಯ ಸರ್ಕಾರ ಹಾಗೂ ಶೇ 10 ಸ್ಥಳೀಯ ಸಂಸ್ಥೆಯ ಅನುದಾನದಿಂದ ಬಂದಿದೆ. ನಾವು ಕೇಂದ್ರಕ್ಕೆ ಜಿಎಸ್‌ಟಿ ಕಟ್ಟುತ್ತಿದ್ದೇವೆ. ಅದೇ ದುಡ್ಡನ್ನು ನಮಗೆ ಕೊಟ್ಟಿದ್ದಾರೆ ಎಂದರು.

> ಮಂಕಿ ಪಟ್ಟಣ ಪಂಚಾಯಿತಿಗೆ ಎಲ್ಲರಿಗೂ ನೀರು ದೊರಕಿಸಲು ₹106 ಕೋಟಿ ಅಂದಾಜು ವೆಚ್ಚದ ಕಾಮಗಾರಿಗೆ ಅನುದಾನ ತರಲಾಗಿದೆ.
>
> • **ಮಂಕಾಳ ವೈದ್ಯ** ಸಚಿವ

ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದ ನಾಯ್ಕ ಮಾತನಾಡಿ, ನಮ್ಮ ಕಾಂಗ್ರೆಸ್ ಜನಪರವಾದ ಯೋಜನೆಗಳನ್ನು ನೀಡಿ ಬಡವರ ಪರ ನಿಂತಿದೆ. ಮಂಕಾಳ ವೈದ್ಯ ಅವರು ಮಂಕಿಯಲ್ಲಿ ನೀರಿನ ಅಗತ್ಯತೆ ಮನಗಂಡು ಈ ಯೋಜನೆ ತಂದಿದ್ದಾರೆ. ಮಂಕಿಯಲ್ಲಿ ಕಾಂಗ್ರೆಸ್ಕ ಚೇರಿ ನಿರ್ಮಿಸಲು 20 ಗುಂಟೆ ಜಾಗ ಮಂಜೂರಿ ಮಾಡಿದ್ದಾರೆ. ಕಾರ್ಯಕರ್ತರು ಬೆಂಬಲಿಸಬೇಕು ಎಂದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರವಾರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಶಿವರಾಮ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು.

ಉಪ ವಿಭಾಗಾಧಿಕಾರಿ ಪ್ರವೀಣ ಕರಾಂಡೆ, ಗ್ಯಾರಂಟಿ ಸಮಿತಿ ಅಧ್ಯಕ್ಷ ಅಣ್ಣಪ್ಪ ನಾಯ್ಕ, ಪಪಂ ಸದಸ್ಯರಾದ ಸಂಜೀವ ನಾಯ್ಕ, ಗಜಾನನ ನಾಯ್ಕ, ಸತೀಶ ನಾಯ್ಕ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶಿವರಾಮ ಸಂಗುಮನೆ, ವಾಮನ ನಾಯ್ಕ ಇದ್ದರು.

ಅಕ್ರಮವಾಗಿ ಸರ್ಕಾರಿ ಜಮೀನು ಹಂಚಿಕೆ: ದೂರು



ದುರುದ್ದೇಶ ಪೂರಿತವಾಗಿ ಸರಕಾರಿ ಜಾಗವನ್ನು ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಿ ತಾಲೂಕಿನ ಇಂದೂರಕೊಪ್ಪ ಗ್ರಾಮದ ರಾಮಚಂದ್ರ, ಈರಪ್ಪ ಹುಲಿಕಟ್ಟಿ ಎಂಬುವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

• **ಕನ್ನಡಪ್ರಭ ವಾರ್ತೆ** ಮುಂಡಗೋಡ

ದುರುದ್ದೇಶ ಪೂರಿತವಾಗಿ ಸರಕಾರಿ ಜಾಗವನ್ನು ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಿ ತಾಲೂಕಿನ ಇಂದೂರಕೊಪ್ಪ ಗ್ರಾಮದ ರಾಮಚಂದ್ರ, ಈರಪ್ಪ ಹುಲಿಕಟ್ಟಿ ಎಂಬುವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

ನಮ್ಮ ಭೂಮಿ ನಮ್ಮ ತೋಟ ಯೋಜನೆ ಅಡಿಯಲ್ಲಿ ಮುಂಡಗೋಡ ತಾಲೂಕಿನ ಇಂದೂರ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೊಪ್ಪ ಗ್ರಾಮದ ಸ.ನಂ. 86 ಕ್ಷೇತ್ರ 02-12-00 ಮತ್ತು ಸ.ನಂ. 80 ಕ್ಷೇತ್ರ 02-21-00 (ಮಾಲ್ಕಿ ಕರ್ನಾಟಕ ರಾಜ್ಯ ರಾಜಪಾಲರ ಪರವಾಗಿ ಇಂದೂರ) ಗ್ರಾಮ ಪಂಚಾಯತ್ ಕಾರ್ಯದರ್ಶಿ ಅವರ ಅಡಿಯಲ್ಲಿ ಜಮೀನು ಇದ್ದು, ಈ ಜಾಗವನ್ನು ಫಲಾನುಭವಿಗಳಿಗೆ ಹಂಚಲು ಸೂಕ್ತ ಕ್ರಮ ತೆಗೆದುಕೊಳ್ಳಲು ತಾವು ಆದೇಶವನ್ನು ಮಾಡಿದ್ದೀರಿ. ಆದರೆ, ಈಗಾಗಲೆ ಕೆಲ ರಾಜಕೀಯ ವ್ಯಕ್ತಿಗಳು ಈ ಜಾಗವನ್ನು ತೋರಿಸಿ ಒಂದಿಷ್ಟು ಫಲಾನುಭವಿಗಳಿಂದ ಹಣ ಪಡೆದು ಈಗಾಗಲೆ ಹಂಚಿದ್ದಾರೆ. ತಮ್ಮ ಮಾರ್ಗಸೂಚಿ ಇಲ್ಲದೆ ಈ ಜಾಗವನ್ನು ಕೆಲ ರಾಜಕಾರಿಣಿಗಳು ತಮ್ಮ ಇಚ್ಛೆ ಬಂದಂತೆ ತಮಗೆ ಬೇಕಾದ ವ್ಯಕ್ತಿಗಳಿಗೆ ಹಂಚಿದ್ದಾರೆ. ಈ ಜಾಗೆಯ ಕುರಿತಾಗಿ ಇಂದೂರ ಪಿಡಿಒ ಅವರು ಪೋಡಿ ದುರಸ್ಥಿ ಮತ್ತು ಸರ್ವೆ ಕಾರ್ಯ ಆಗದೇ ಇದ್ದರು ಜಾಗ ಹೇಗೆ ಹಂಚಿದರು ಎಂಬುದರ ಕುರಿತು ತಕರಾರು ಅರ್ಜಿ ಸಲ್ಲಿಸಲಾಗಿದೆ.

ಅಲ್ಲದೇ ಇಂದೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಪ್ಪ ಗ್ರಾಮದಲ್ಲಿ ಶಾಸಕ ಶಿವರಾಮ ಹೆಬ್ಬಾರ ಅವರು ಸ್ಥಳಿಯ ಪ್ರದೇಶಾಭಿವೃದ್ಧಿ ಯೋಜನೆ ಅನುದಾನದಡಿ ಬಸ್ ನಿಲ್ದಾಣ ನಿರ್ಮಿಸಲು ₹3 ಲಕ್ಷ ಅನುದಾನ ನೀಡಿದ್ದಾರೆ. ಆದರೆ, ಈ ಕಾಮಗಾರಿಯ ಕುರಿತು ಫಲಕದಲ್ಲಿ ಕೇವಲ ₹2 ಲಕ್ಷ ತೋರಿಸಿದ್ದಲ್ಲದೆ ಬಸ್ ನಿಲ್ದಾಣ ನಿರ್ಮಿಸಲು ₹50 ಸಾವಿರ ಖರ್ಚೂ ಮಾಡಲಾಗಿಲ್ಲ ಎಂದು ಆರೋಪಿಸಲಾಗಿದೆ.

ಇದೇ ರೀತಿ ಮುಂಡಗೋಡ ತಾಲೂಕಿನ ನಂದಿಕಟ್ಟಾ ಗ್ರಾಮದ ಸ.ನಂ.40 ರಲ್ಲಿ ಒಟ್ಟು ಕ್ಷೇತ್ರ 06-27-00 ಸೇರಿದಂತೆ ತಾಲೂಕಿನ ವಿವಿಧ ಗ್ರಾಮದಲ್ಲಿರುವಂತ ಸರಕಾರಿ ಪಡಾ ಜಾಗೆಗಳನ್ನು ಅಧಿಕಾರಿಗಳ ಮೂಲಕ ಸೂಕ್ತ ಫಲಾನುಭವಿಗಳಿಗೆ ಹಂಚಬೇಕೆ ವಿನಃ ಯಾವ ರಾಜಕಾರಣಿ ವ್ಯಕ್ತಿಗಳಿಗೂ ಇದರಲ್ಲಿ ಅವಕಾಶ ಕೊಡಬಾರದು. ಈ ವಿಷಯಗಳ ಬಗ್ಗೆ ಪರಿಶೀಲನೆ ನಡೆಸಿ ಅತೀ ಶೀಘ್ರದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಬಸ್ಸು ಬನ್ನಿಗಟ್ಟಿ, ರಾಧಾ ಕುಶಲಗಿ, ಶಿವಪ್ಪ, ಲಕ್ಷ್ಮವ್ವ ಉಪಸ್ಥಿತರಿದ್ದರು.

ವಿಷಾಹಾರ ಸೇವಿಸಿ ತೀವ್ರ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ



ವಿಷಾಹಾರ ಸೇವಿಸಿ ತೀವ್ರ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ ನೀಡುತ್ತಿರುವುದು.

• **ಕನ್ನಡಪ್ರಭ ವಾರ್ತೆ** ಗೋಕರ್ಣ

ಚಿನ್ನದಕೇರಿಯ ಪರಶುರಾಮ ದೇವಸ್ಥಾನ ಬಳಿ ವಿಷಾಹಾರ ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ ನೀಡಿದ ಘಟನೆ ಭಾನುವಾರ ಸಂಜೆ ನಡೆದಿದೆ.

ತೀವ್ರವಾಗಿ ಅಸ್ವಸ್ಥಗೊಂಡು ರಸ್ತೆಯಲ್ಲಿ ಬಿದ್ದ ಎತ್ತನ್ನು ಗಮನಿಸಿದ ಸ್ಥಳೀಯರಾದ ರಾಜವರ್ಧನ ಭಟ್ ಅವರು ಕೂಡಲೇ ಪ್ರಾಣಿ ಪ್ರಿಯ ಹಾಗೂ ಗ್ರಾಪಂ ಮಾಜಿ ಸದಸ್ಯ ಸುಜಯ ಶೆಟ್ಟಿ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಸುಜಯ ಅವರು ಭಾನುವಾರ ಪಶು ವೈದ್ಯರು ಲಭ್ಯವಿಲ್ಲದ ಕಾರಣ 1962 ಪಶು ಸಹಾಯವಾಣಿಗೆ ಕರೆ ಮಾಡಿ ಕುಮಟಾದಿಂದ ಪಶು ಸಂಚಾರಿ ಆ್ಯಂಬುಲೆನ್ಸ್ ಅನ್ನು ಸ್ಥಳಕ್ಕೆ ಕರೆಯಿಸಿ ತೀವ್ರವಾಗಿ ಅಸ್ವಸ್ಥಗೊಂಡ ಎತ್ತಿಗೆ ಚಿಕಿತ್ಸೆ ನೀಡಿ ಮಾನವೀಯತೆ ಮೆರೆದಿದ್ದಾರೆ. ಪಾರಾವೆಟ್ ಸಿಬ್ಬಂದಿ ಸಚಿನಕುಮಾರ್‌ಕವಲಗಿ ಹಾಗೂ ಸಂತೋಷ್ ನಾಯ್ಕ ಅವರು ಎತ್ತಿಗೆ ಚಿಕಿತ್ಸೆ ನೀಡಿದ್ದಾರೆ. ಮೂಕ ಪ್ರಾಣಿಯ ವೇದನೆಗೆ ಸ್ಪಂದಿಸಿ ಮಾನವೀಯತೆ ಮೆರೆದ ಚಿಕಿತ್ಸೆ ಕೊಡಿಸಿದ ತಂಡಕ್ಕೆ ಸಾರ್ವಜನಿಕರು ಪ್ರಶಂಸಿಸಿ ಅಭಿನಂದಿಸಿದ್ದಾರೆ.

ಶಿಬಿರ... ದೇವರಕಲ್ಲಳ್ಳಿಯ ಬಯಲು ರಂಗ ಮಂದಿರದಲ್ಲಿ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ

ಕಲೆ, ಸಂಗೀತ, ಸಾಹಿತ್ಯ ಜಾತಿಗೆ ಮೀರಿದ್ದು: ಭಟ್ಟ

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ಕಲೆ, ಸಂಗೀತ, ಸಾಹಿತ್ಯವು ಜಾತಿಯನ್ನು ಮೀರಿದೆ. ಎಲ್ಲರೂ ಒಂದೇ ಎಂಬ ಭಾವನೆ ಬೆಳೆಸಿಕೊಂಡಾಗ ನಮ್ಮನ್ನೆಲ್ಲ ಒಗ್ಗೂಡಿಸುತ್ತದೆ. ಎಲ್ಲರಿಗೂ ಸಮಾನತೆ ಎಂಬುವುದು ಅಂಬೇಡ್ಕರ್, ಗಾಂಧಿ ಕಂಡ ಕನಸು. ನಾಟಕವೂ ಕೂಡ ಜಾತಿಗೆ ಮೀರಿದ್ದು ಎಂದು ಹಿರಿಯ ರಂಗಕರ್ಮಿ, ಮಂಚಿಕೇರಿ ರಂಗ ಸಮೂಹದ ಅಧ್ಯಕ್ಷ ಆರ್.ಎನ್. ಭಟ್ಟ ದುಂಡಿ ಹೇಳಿದರು.

ದೇವರಕಲ್ಲಳ್ಳಿಯ ಬಯಲು ರಂಗ ಮಂದಿರದಲ್ಲಿ ಗುರುವಾರ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಾಗೂ ದೇವರಕಲ್ಲಳ್ಳಿ ಸಿದ್ದಿ ಟ್ರಸ್ಟ್ ಸಹಯೋಗದಲ್ಲಿ ನಡೆದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಸಿದ್ದಿಯರ ಸಾಂಪ್ರದಾಯಿಕ ವಾದನವಾಗಿರುವ ಡಮಾಮಿ ನುಡಿಸಿ, ಉದ್ಘಾಟಿಸಿ ಅವರು ಮಾತನಾಡಿದರು. ಎಲ್ಲ ಭಾಷೆಯಂತೆಯೇ ಕೊಂಕಣಿ ಭಾಷೆಗೆ ಕೂಡ ಬಾಂಧವ್ಯ ಬೆಸೆಯುವ ಶಕ್ತಿಯಿದೆ. ನಮ್ಮ ಪ್ರದೇಶದಲ್ಲಿ ಅನೇಕರು ಕೊಂಕಣಿ ಭಾಷೆಯನ್ನು ಮನೆಯಲ್ಲಿ ಮಾತನಾಡುವ ರೂಢಿ ಇದೆ ಎಂದರು.



ಯಲ್ಲಾಪುರ ತಾಲೂಕಿನ ದೇವರಕಲ್ಲಳ್ಳಿಯ ಬಯಲು ರಂಗ ಮಂದಿರದಲ್ಲಿ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರೀಸ್ ಮಾತನಾಡಿ, ಸಿದ್ದಿ ಜನಾಂಗ ದವರು ಎಲ್ಲ ರಂಗದಲ್ಲೂ ಮುಂದಿದ್ದಾರೆ. ಹಾಗೆ ಕೊಂಕಣಿ ನಿಮ್ಮ ತಾಯಿ, ಕನ್ನಡ ನಿಮ್ಮ ಸಾಕು ತಾಯಿ; ಎರಡನ್ನು ಉಳಿಸಿ ಬೆಳೆಸಿ ಎಂದರು.

ಕನ್ನಡ ಕೊಂಕಣಿ ಲೇಖಕ ಶಿರಸಿಯ ವಾಸುದೇವ ವಿ. ಶಾನಭಾಗ್ ಮಾತನಾಡಿ, 1985ರಲ್ಲಿ ಸಿದ್ದಿ ಜನರ ಮೊದಲ ನಾಟಕ 'ಕಪ್ಪು ಜನಕೆಂಪು ನೆರಳು' ನಾಟಕದಲ್ಲಿ ಅಭಿನಯಿಸಿದ್ದ ಅನುಭವ ಹಂಚಿಕೊಂಡರು.

> ■ ಎಲ್ಲ ಭಾಷೆಯಂತೆಯೇ ಕೊಂಕಣಿ ಭಾಷೆಗೆ ಕೂಡ ಬಾಂಧವ್ಯ ಬೆಸೆಯುವ ಶಕ್ತಿಯಿದೆ
>
> ■ ಸಿದ್ದಿ ಜನಾಂಗ ದವರು ಎಲ್ಲ ರಂಗದಲ್ಲೂ ಮುಂದಿದ್ದಾರೆ

ಜಿಪಂ ಮಾಜಿ ಸದಸ್ಯ ರಾಘವೇಂದ್ರ ಭಟ್ಟ ಹಾಸಣಗಿ ಮಾತನಾಡಿ, ಸಿದ್ದಿ ಟ್ರಸ್ಟ್‌ನ ಸಂಸ್ಥಾಪಕ ಜಿ. ಚನ್ನಕೇಶವ ಅವರನ್ನು ನೆನಪಿಸಿಕೊಳ್ಳುತ್ತ ಸಿದ್ದಿ ಜನಾಂಗವನ್ನು ಮುಖ್ಯವಾಹಿನಿಗೆ ಕರೆ ತರುವಲ್ಲಿ ಶ್ರಮಿಸಿದವರು ಎಂದರು.

ಸಿದ್ದಿ ಟ್ರಸ್ಟ್‌ನ ಅಧ್ಯಕ್ಷ ಗಿರೀಶ್ ಪಿ. ಸಿದ್ದಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಂಚಿಕೇರಿ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಅಧ್ಯಕ್ಷ ರಘುಪ್ರಸಾದ್ ಭಟ್ಟ ಹೊನ್ನಳ್ಳಿ, ಅಂತರರಾಷ್ಟ್ರೀಯ ಜಾನಪದ ಕಲಾವಿದ ಜೂಲಿಯಾನಾ ಸಿದ್ದಿ ಗಾಡಗೇರಾ, ಕರ್ನಾಟಕ ಕೊಂಕಣಿ ಅಕಾಡೆಮಿ ಸದಸ್ಯರಾದ ಸುನಿಲ್ ಸಿದ್ದಿ, ನವೀನ ಲೋಬೊ, ಶಿಬಿರದ ನಿರ್ದೇಶಕಿ ಡಾ. ಗೀತಾ ಸಿದ್ದಿ ಮತ್ತಿತರರು ಉಪಸ್ಥಿತರಿದ್ದರು.

ಜೂಲಿಯಾನಾ ಸಿದ್ದಿಯವರಿಗೆ ಸಿದ್ದಿ ಟ್ರಸ್ಟ್ ವತಿಯಿಂದಗೌರವಸನ್ಮಾನಮಾಡಲಾಯಿತು. ತೂಗು ತೊಟ್ಟಿಲು ಶಿಬಿರದ ಮಕ್ಕಳಾದ ಪನ್ನಿಕಾ ಸಿದ್ದಿ, ದಿವ್ಯಾ ಸಿದ್ದಿ, ವಿನೀತಾ ಸಿದ್ದಿ, ಚಲನಾ ಸಿದ್ದಿ ಹಾಗೂ ದಿವ್ಯಾ ಸಿದ್ದಿ ವನದೇವತೆಯ ಕುರಿತು ಪ್ರಾರ್ಥಿಸಿದರು. ದಿವ್ಯಾ ಸಿದ್ದಿ ಸ್ವಾಗತಿಸಿದರು. ಪನ್ನಿಕಾ ಸಿದ್ದಿ ಕಾರ್ಯಕ್ರಮ ನಿರ್ವಹಿಸಿದರು. ಚಲನಾ ಸಿದ್ದಿ ವಂದಿಸಿದರು.

ಮೊದಲಿಗೆ ಮಕ್ಕಳಿಂದ ಡಮಾಮಿ, ಪುಗಡಿ ಹಾಗೂ ಜಕ್ಕೈ ನೃತ್ಯ ಪ್ರದರ್ಶನ ನಡೆಯಿತು.

ಸಂಜೆ 7 ಗಂಟೆಗೆ ಕೋಟಗಾನಹಳ್ಳಿ ರಾಮಯ್ಯ ಅವರ ಹಕ್ಕಿ ಹಾಡು ನಾಟಕದ ಕೊಂಕಣಿ ರೂಪಾಂತರ 'ಸವಣ್ಯಾಚಿ ಗಾಣಿ' ಕೊಂಕಣಿ ನಾಟಕವನ್ನು ಡಾ. ಗೀತಾ ಸಿದ್ದಿ ನಿರ್ದೇಶನದಲ್ಲಿ ಶಿಬಿರಾರ್ಥಿಗಳು ಅಭಿನಯಿಸಿದರು.

ಜಾಗತಿಕ ತಾಪಮಾನ ಏರಿಕೆ, ಅತಿಯಾದ ರಾಸಾಯನಿಕ ಬಳಕೆ ಹಾಗೂ ಆಧುನಿಕೀಕರಣದ ಪರಿಣಾಮವಾಗಿ ಗುಬ್ಬಚ್ಚಿಗಳ ಸಂಖ್ಯೆ ಕುಸಿಯುತ್ತಿರುವುದು ಚಿಂತಾಜನಕವಾಗಿದೆ.
• **ಸಂಗಮೇಶ ಪ್ರಭಾಕರ್** ಮಂಚಿಕೇರಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

ಸುದ್ದಿ ಸಿಂಚನ

ಹೃದಯಾಘಾತದಿಂದ 13 ವರ್ಷದ ಬಾಲಕಿ ಸಾವು?



ಜೋಯಿಡಾ: ತಾಲೂಕಿನ ಅಸು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಾಪಾಲಿ ಗೌಳಿವಾಡಾದಲ್ಲಿ 13 ವರ್ಷದ ಬಾಲಕಿ ಗಂಗು ನವಲು ಗೌಳಿ ಮೃತಪಟ್ಟಿದ್ದಾಳೆ. ಈ ಬಾಲಕಿ ಹೃದಯಾಘಾತದಿಂದ ಮೃತಪಟ್ಟಿದ್ದಾಳೆ ಎನ್ನಲಾಗಿದೆ. ಮುಗ್ಧ ವಯಸ್ಸಿನಲ್ಲಿ ಈ ದುಃಖದ ಅಂತ್ಯ ಗ್ರಾಮದಲ್ಲಿ ಆಳವಾದ ಶೋಕವನ್ನುಂಟು ಮಾಡಿದೆ. ರಾಮನಗರದ ಹನುಮಾನ ಗಲ್ಲಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ಗಂಗು ಬಾಲಕಿಯರ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದು, ಬೇಸಿಗೆ ರಜೆಗೆ ಮನೆಗೆ ಬಂದಿದ್ದಳು. ಕುಟುಂಬ ಸದಸ್ಯರ ಮಾಹಿತಿ ಪ್ರಕಾರ, ಗಂಗು ಸಾಮಾನ್ಯವಾಗಿ ಆಟವಾಡುತ್ತ, ಮನೆ ಕೆಲಸಗಳಲ್ಲಿ ಸಹಾಯ ಮಾಡುತ್ತ ಸಹಜವಾಗಿದ್ದಳು. ಆದರೆ ವಿಧಿ ನಿರ್ಧಾರ ಬೇರೆ ರೀತಿಯಾಗಿತ್ತು. ರಾತ್ರಿ ಊಟದ ನಂತರ ಮಲಗಿದ್ದ ಗಂಗು ಬೆಳಗ್ಗೆ ವಾಂತಿ ಮಾಡಿಕೊಂಡು ಕೆಲವೇ ಕ್ಷಣಗಳಲ್ಲಿ ಪ್ರಾಣಬಿಟ್ಟಿದ್ದಾಳೆ. ಆಸ್ಪತ್ರೆಗೆ ಕರೆದೊಯ್ಯುವ ಮುನ್ನವೇ ಆಕೆ ಮೃತಪಟ್ಟಿದ್ದಾಳೆ. ಗಂಗು ಯಾವುದೇ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರಲಿಲ್ಲ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ. ಈ ಆಕಸ್ಮಿಕ ಸಾವು ಜನತೆ ಆತಂಕಗೊಳ್ಳುವಂತೆ ಮಾಡಿದೆ.

ನಾಳೆ ಭಾವ ವೀಣೆ ಮಿಡಿದಾಗ ಕಾರ್ಯಕ್ರಮ

ದಾಂಡೇಲಿ: ಕಸಾಪ ದಾಂಡೇಲಿ ತಾಲೂಕು ಘಟಕದಿಂದ ಭಾವ ವೀಣೆ ಮಿಡಿದಾಗ ಕಾರ್ಯಕ್ರಮ ಮಂಗಳಾವರ ಮೇ 5ರಂದು ಬೆಳಗ್ಗೆ 11.30ಕ್ಕೆ ನಗರದ ಆಶಾಕಿರಣ ಐಟಿಐ ಕಾಲೇಜಿನಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಬಂಗೂರನಗರ ಪದವಿಪೂರ್ವ ಕಾಲೇಜಿ ಪ್ರಾಚಾರ್ಯ ಎನ್.ವಿ. ಪಾಟೀಲ ಉದ್ಘಾಟಿಸಲಿದ್ದು, ಅತಿಥಿಗಳಾಗಿ ದಿವಾಕರ ನಾಯಕ, ಉಪನ್ಯಾಸಕಿ ದೀಪಾ ಟಿ. ನಾಯ್ಕ ಉಪಸ್ಥಿತರಿರುವರು. ಕಸಾಪ ಜಿಲ್ಲಾಧ್ಯಕ್ಷ ಬಿ ಎನ್ ವಾಸರೆ ಅಧ್ಯಕ್ಷತೆ ವಹಿಸಲಿದ್ದಾರೆ. ಆಶಾಕಿರಣ ಐಟಿಐ ಕಾಲೇಜಿನ ಪ್ರಚಾರ್ಯ ನಾಗೇಶ ನಾಯ್ಕ ಹಾಗೂ ಮುರ್ತುಜಾಹುಸೇನ್ ಆನೆಹೊಸೂರ ಉಪಸ್ಥಿತರಿರುವರ. ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಂಘಟಕರು ವಿನಂತಿಸಿದ್ದಾರೆ.

ವ್ಯಕ್ತಿ ಮೇಲೆ ಮೊಸಳೆ ದಾಳಿ: ಗಂಭೀರ ಗಾಯ



ಮೊಸಳೆ ದಾಳಿಯಿಂದ ಗಾಯಗೊಂಡ ವ್ಯಕ್ತಿ.

ದಾಂಡೇಲಿ: ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಕುಳಗಿ ರಸ್ತೆಯಲ್ಲಿರುವ ಕಾಳಿ ನದಿಯಲ್ಲಿ ವ್ಯಕ್ತಿಯೊಬ್ಬರ ಮೇಲೆ ಮೊಸಳೆ ದಾಳಿ ನಡೆಸಿದ ಘಟನೆ ಭಾನುವಾರ ಮುಂಜಾನೆ ನಡೆದಿದೆ. ಸ್ಥಳೀಯ ಸಾರ್ವಜನಿಕ ಶೌಚಾಲಯ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಬಹಿರ್ದೆಸೆಗಾಗಿ ನದಿಗೆ ಇಳಿದಿದ್ದ ವ್ಯಕ್ತಿಯೋರ್ವನ ಮೇಲೆ ಮೊಸಳೆಯೊಂದು ದಾಳಿ ಮಾಡಿ ಗಂಭೀರ ಗಾಯಗೊಳಿಸಿದೆ. ಕುಳಗಿ ರಸ್ತೆಯ ನಿವಾಸಿ ಆನಂದ ಲಲ್ಲೂಜಿ ಮಣ್ಣವಡ್ಡರ ಎಂಬವರು ಗಂಭೀರ ಗಾಯಗೊಂಡಿದ್ದಾರೆ. ಮೊಸಳೆ ದಾಳಿಗೆ ಸಿಲುಕಿ ಆನಂದ ಕಿರುಚಾಡುವುದನ್ನು ಕೇಳಿಸಿಕೊಂಡ ಸ್ಥಳೀಯರು ಆಗಮಿಸಿ ಮೊಸಳೆ ಓಡಿಸಿದ್ದಾರೆ. ಕಾಲಿಗೆ ಹಾಗೂ ಇನ್ನಿತರ ಭಾಗಗಳಿಗೆ ಗಾಯವಾಗಿದ್ದು, ಅವರನ್ನು ತಕ್ಷಣವೇ ನಗರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತರಲಾಗಿದೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡಕ್ಕೆ ರವಾನಿಸಲಾಗಿದೆ. ಕಾಳಿ ನದಿ ಹತ್ತಿರ ಪ್ರದೇಶದಲ್ಲಿರುವ ಸಾರ್ವಜನಿಕ ಶೌಚಾಲಯ ಸರಿಯಾಗಿ ನಿರ್ವಹಣೆ ಮಾಡಬೇಕು ಎಂಬ ಆಗ್ರಹ ಈಗ ಕೇಳಿ ಬರತೊಡಗಿದೆ. ಸಾರ್ವಜನಿಕ ಆಸ್ಪತ್ರೆಗೆ ಸಿಪಿಐ ಶಿವಾನಂದ ಅಂಬಿಗೇರ, ಪಿಎಸ್ಐ ಅಮೀನ ಅತ್ತಾರ ಹಾಗೂ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ.

■ ಬಹಿರ್ದೆಸೆಗಾಗಿ ನದಿಗೆ ಇಳಿದಿದ್ದ ವ್ಯಕ್ತಿ ಮೇಲೆ ದಾಳಿ

ದಾಹ ತೀರಿಸಿಕೊಳ್ಳಲು ನಾಡಿಗೆ ಬಂದು ಪ್ರಾಣ ಬಿಡುತ್ತಿರುವ ಪ್ರಾಣಿಗಳು: ಆತಂಕ

ಕೆರೆ, ಹಳ್ಳಗಳೆಲ್ಲ ಬತ್ತಿದ್ದರಿಂದ ನಾಡಿಗೆ ಬರುತ್ತಿರುವ ಪ್ರಾಣಿಗಳು | ವಾಹನಕ್ಕೆ ಸಿಲುಕಿ, ಬೀದಿನಾಯಿಗಳ ದಾಳಿಗೆ ಬಲಿ



ಮುಂಡಗೋಡದಲ್ಲಿ ಆಹಾರ, ನೀರಿಗಾಗಿ ನಾಡಿಗೆ ಬಂದು ಆಪತ್ತಿಗೆ ಸಿಲುಕಿ ಪ್ರಾಣಬಿಟ್ಟ ಜಿಂಕೆ.

ತೀವ್ರವಾದ ಬಿಸಿಲಿನಿಂದ ಅರಣ್ಯ ಪ್ರದೇಶದಲ್ಲಿ ಪ್ರಾಣಿಗಳಿಗೆ ಕುಡಿಯಲು ಕಿಂಚಿತ್ತೂ ನೀರಿಲ್ಲಂತಾಗಿರುವುದೇ ಪ್ರಾಣಿಗಳು ನಾಡಿನತ್ತ ಮುಖ ಮಾಡಲು ಕಾರಣವಾಗಿದೆ. ವನ್ಯಜೀವಿ ಸಂರಕ್ಷಣೆಗಾಗಿ ಸರ್ಕಾರಗಳು ಕೋಟ್ಯಂತರ ರುಪಾಯಿ ವ್ಯಯಿಸುತ್ತವೆ. ಅರಣ್ಯ ಇಲಾಖೆಯವರು ಎಚ್ಚೆತ್ತುಕೊಂಡು ಅರಣ್ಯ ಪ್ರದೇಶದಲ್ಲಿ ಅಗತ್ಯ ಬೋರ್‌ವೆಲ್ ಕೊರೆಸಿ ಪ್ರಾಣಿಗಳಿಗೆ ನೀರಿನ ವ್ಯವಸ್ಥೆ ಮಾಡಬೇಕು.
• **ಮಂಜುನಾಥ ಶೇಟ್** ಸಾಮಾಜಿಕ ಕಾರ್ಯಕರ್ತರು

• **ಸಂತೋಷ ದೈವಜ್ಞ**
ಕನ್ನಡಪ್ರಭ ವಾರ್ತೆ ಮುಂಡಗೋಡ

ಉರಿ ಬಿಸಿಲಿನಿಂದ ಅರಣ್ಯ ಪ್ರದೇಶದ ಜಲಾಶಯ, ಕೆರೆ, ಹಳ್ಳ ಗುಂಡಿಗಳೆಲ್ಲ ಬತ್ತಿ ಹೋಗಿದ್ದು, ಕಾಡುಪ್ರಾಣಿಗಳು ನೀರಿನ ದಾಹ ತೀರಿಸಿಕೊಳ್ಳಲು ನಾಡಿಗೆ ಬಂದು ಪ್ರಾಣ ಬಿಡುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಇದು ಪರಿಸರಪ್ರಿಯರ ಕಳವಳ ಹೆಚ್ಚಿಸಿದೆ.

ತಾಲೂಕಿನ ಬಹುತೇಕ ಭಾಗ ಅರಣ್ಯದಿಂದ ಕೂಡಿದ್ದು, ಇಲ್ಲಿ ಜಿಂಕೆ, ಸಾರಂಗಗಳು, ಕರಡಿ, ಕಾಡು ಹಂದಿ, ನರಿ ಸೇರಿದಂತೆ ಅಪಾರ ಪ್ರಮಾಣದಲ್ಲಿ ವನ್ಯ ಜೀವಿಗಳು ವಾಸಿಸುತ್ತವೆ. ಈ ಹಿಂದೆ ಕಾಡುಗಳ್ಳ ಬೇಟೆಗಾರರ ಕೈಗೆ ಸಿಕ್ಕುಮಾತ್ರ ಬಲಿಯಾಗುತ್ತಿದ್ದ ಪ್ರಾಣಿಗಳೀಗ ನೀರಿನ ದಾಹ ತಣಿಸಿಕೊಳ್ಳಲು ನಾಡಿಗೆ ಬಂದು ತಾವೇ ಪ್ರಾಣ ಕಳೆದುಕೊಳ್ಳುತ್ತಿರುವುದು ವಿಪರ್ಯಾಸ.

ತಾಪಮಾನ ಹೆಚ್ಚಿದ್ದರಿಂದ ಅರಣ್ಯ ಪ್ರದೇಶದ ಕೆರೆ-ಕಟ್ಟೆಗಳು, ಹಳ್ಳ-ಕೊಳ್ಳಗಳು ನೀರಿಲ್ಲದೆ ಬರಡು ಗುಂಡಿಯಂತಾಗಿದೆ. ದಾಹ ತಣಿಸಿಕೊಳ್ಳಲು ಕಾಡು ಪ್ರಾಣಿಗಳೆಲ್ಲ ಕಾಡಿನಿಂದ ನಾಡಿನತ್ತ ಲಗ್ಗೆ ಇಟ್ಟು ಪ್ರಾಣ ಬಿಡುತ್ತಿವೆ. ಇನ್ನುಳಿದ ದಿನಗಳಲ್ಲಿ ಹಸಿರಿನಿಂದ ಕಂಗೊಳಿಸುವ ಕಾಡು ಈಗ ಬಣ ಬಣ ಎನ್ನುತ್ತಿವೆ. ಕಾಡುಪ್ರಾಣಿಗಳಿಗೆ ನೆರಳು ಇಲ್ಲದಂತಾಗಿದೆ. ಬಿಸಿಲಿನ ಕಾವಿನಿಂದ ಕಂಗೆಟ್ಟು ಹೋಗಿರುವ ಪ್ರಾಣಿಗಳು ನೀರು-ನೆರಳು ಇರುವ ಜಾಗ ಅರಸಿ ಹೋಗುತ್ತವೆ. ಕೆಲವೊಮ್ಮೆ ರಸ್ತೆ ದಾಟುವ ಧಾವಂತದಲ್ಲಿ ವಾಹನಗಳಿಗೆ ಸಿಲುಕಿ ಸಾಯುತ್ತಿವೆ. ಇನ್ನೊಂದೆಡೆ ನಾಡಿಗೆ ಬಂದ ಪ್ರಾಣಿಗಳನ್ನು ಬೀದಿನಾಯಿಗಳು ಬೆನ್ನಟ್ಟಿ ಕಚ್ಚಿ ಗಾಯಗೊಳಿಸುತ್ತವೆ. ಇದರಿಂದ ಜಿಂಕೆಗಳು ಹೃದಯಾಘಾತಗೊಂಡು ಪ್ರಾಣ ಬಿಡುತ್ತವೆ. ಪ್ರಸಕ್ತ ಸಾಲಿನಲ್ಲಿ ಇದುವರೆಗೂ ಸಾಕಷ್ಟು ಕಡೆ ಜಿಂಕೆ, ಸಾರಂಗಗಳು ಪ್ರಾಣ ಬಿಟ್ಟಿವೆ.

ಆತಂಕ: ಬೇಸಿಗೆ ಪ್ರಾರಂಭವಾದಾಗಿನಿಂದ ತಾಲೂಕಿನ ಬಹುತೇಕ ಭಾಗದ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡು ಬೆಂಕಿಯ ಕೆನ್ನಾಲಿಗೆಗೆ ಸಾಕಷ್ಟು ಪ್ರಮಾಣದ ಅರಣ್ಯ ನಾಶವಾಗಿದೆ. ಆಗಾಗ ಅಲ್ಲಲ್ಲಿ ಬೆಂಕಿಕಾಣಿಸಿಕೊಳ್ಳುತ್ತಿರುವುದರಿಂದಭಯಭೀತಗೊಳ್ಳುವ ಕಾಡುಪ್ರಾಣಿಗಳು ದಿಕ್ಕಾಪಾಲಾಗಿ ಓಡುತ್ತವೆ. ಕೆಲವು ನಾಡಿನೆಡೆಗೆ ಮುಖ ಮಾಡಿ ಸಂಕಷ್ಟಕ್ಕೆ ಸಿಲುಕುತ್ತಿವೆ.

ಮುಂಜಾಗ್ರತಾ ಕ್ರಮದ ಕೊರತೆ: ಕೆರೆ-ಕಟ್ಟೆಗಳೆಲ್ಲ ಬತ್ತಿ ಹೋಗಿದ್ದು, ವನ್ಯಜೀವಿಗಳ ರಕ್ಷಣೆ ದೃಷ್ಟಿಯಿಂದ ಅರಣ್ಯ ಪ್ರದೇಶಗಳಲ್ಲಿ ಪ್ರಾಣಿಗಳಿಗೆ ಕುಡಿಯಲು ಸಮರ್ಪಕ ನೀರಿನ ವ್ಯವಸ್ಥೆಗಾಗಿ ಬೋರ್‌ವೆಲ್ ಅಥವಾ ಗುಂಡಿಗಳನ್ನು ತೆಗೆಸಿ ನೀರು ತುಂಬಿಸುವ ಕೆಲಸವಾಗಬೇಕಿದೆ. ದನ-ಕರುಗಳ (ಜಾನುವಾರುಗಳ) ಪರಿಸ್ಥಿತಿ ಕೂಡ ಇದಕ್ಕೆ ಹೊರತಾಗಿಲ್ಲ. ಕುಡಿಯಲು ನೀರು ಸಿಗದೇ ಜಾನುವಾರುಗಳು ಕೂಡ ಪರದಾಡುತ್ತಿವೆ. ಅಲ್ಲದೇ ತಾಪಮಾನದಿಂದ ಎಲ್ಲಿಯೂ ಹಸಿರು ಹುಲ್ಲು ಎಂಬುವುದೇ ಇಲ್ಲದಂತಾಗಿದ್ದು, ಈ ಬಗ್ಗೆ ಕೂಡ ಸ್ಥಳೀಯ ಸಂಸ್ಥೆ ಅಧಿಕಾರಿಗಳು ಗಮನಹರಿಸಬೇಕಿದೆ.

ನಾಲ್ಕು ದಿನಗಳ ಬೇಸಿಗೆ ಶಿಬಿರದಲ್ಲಿ ಸಂಗಮೇಶ ಪ್ರಭಾಕರ್

ಆಧುನಿಕತೆ ಪರಿಣಾಮ ಗುಬ್ಬಚ್ಚಿಗಳ ಸಂಖ್ಯೆ ಕುಸಿತ



ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಗುಬ್ಬಚ್ಚಿ ಗೂಡುಗಳನ್ನು ವಿತರಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ತಾಲೂಕಿನ ಮಂಚಿಕೇರಿ ವಲಯದ ಜಕ್ಕೊಳ್ಳಿ ಶಾಖಾ ವ್ಯಾಪ್ತಿಯ ಚಿಪಗೇರಿ ಗ್ರಾಮದ ವನವಾಸಿ ಕಲ್ಯಾಣ ವಸತಿ ನಿಲಯದಲ್ಲಿ ಜೀವನ ವಿಕಾಸ ಟ್ರಸ್ಟ್ ಯಲ್ಲಾಪುರ ಹಾಗೂ ವನವಾಸಿ ಕಲ್ಯಾಣ ಕರ್ನಾಟಕ ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗಾಗಿ ನಾಲ್ಕು ದಿನಗಳ ಬೇಸಿಗೆ ಶಿಬಿರ ಆರಂಭಗೊಂಡಿತು.

ಕಾರ್ಯಕ್ರಮವನ್ನು ಮಂಚಿಕೇರಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂಗಮೇಶ ಪ್ರಭಾಕರ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಪರಿಸರ ಸಂರಕ್ಷಣೆಯಲ್ಲಿ ಗುಬ್ಬಚ್ಚಿಗಳ ಪಾತ್ರವನ್ನು ವಿವರಿಸಿ, ಪರಿಸರ ವ್ಯವಸ್ಥೆಯಲ್ಲಿ ಒಂದು ಚಿಕ್ಕ ಪಕ್ಷಿಯೂ ದೊಡ್ಡ ಬದಲಾವಣೆಗೆ ಕಾರಣವಾಗಬಹುದು ಎಂದು ಅಭಿಪ್ರಾಯಪಟ್ಟರು.

ಜಾಗತಿಕತಾಪಮಾನಏರಿಕೆ, ಅತಿಯಾದ ರಾಸಾಯನಿಕ ಬಳಕೆ ಹಾಗೂ ಆಧುನಿಕೀಕರಣದ ಪರಿಣಾಮವಾಗಿ ಗುಬ್ಬಚ್ಚಿಗಳ ಸಂಖ್ಯೆ ಕುಸಿಯುತ್ತಿರುವುದು ಚಿಂತಾಜನಕವಾಗಿದೆ ಎಂದರು.

ಕೃಷಿ ಕ್ಷೇತ್ರದಲ್ಲಿ ಕೀಟ ನಿಯಂತ್ರಣ ಹಾಗೂ ಬೀಜ ಪ್ರಸರಣದಲ್ಲಿ ಗುಬ್ಬಚ್ಚಿಗಳ ಮಹತ್ವವನ್ನು ವಿವರಿಸಿ, ಅವುಗಳ ಸಂರಕ್ಷಣೆಗೆ ಸಮಾಜದ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.

ಮನೆಯ ಸುತ್ತಮುತ್ತ ಪರಿಸರ ಸ್ನೇಹಿ ಗೂಡುಗಳನ್ನು ನೇತು ಹಾಕುವುದು ಹಾಗೂ ಬೇಸಿಗೆಯಲ್ಲಿ ನೀರಿನ ತೊಟ್ಟಿಗಳನ್ನು ಇಡುವ ಮೂಲಕ ಗುಬ್ಬಚ್ಚಿಗಳಿಗೆ ನೆರವಾಗುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ಮನು ವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ ಭಾಗವಹಿಸಿದ್ದರು. ವಸತಿ ನಿಲಯದ ಅಧ್ಯಕ್ಷ ಸೋಮನಾಥ ಸಿದ್ದಿ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಗುಬ್ಬಚ್ಚಿ ಗೂಡುಗಳನ್ನು ವಿತರಿಸಲಾಯಿತು. ಪಕ್ಷಿಗಳಿಗೆ ಇಷ್ಟವಾದ ಇಲಾಚಿ (ಸಿಹಿ ಹುಣಸೆ) ಸಸಿಯನ್ನು ವಸತಿ ನಿಲಯದ ಆವರಣದಲ್ಲಿ ನೆಟ್ಟು ನೀರುಣಿಸಲಾಯಿತು. ಕಾರ್ಯಕ್ರಮದಲ್ಲಿ ವಸತಿ ನಿಲಯದ ಸಿಬ್ಬಂದಿ, ಜೀವನ ವಿಕಾಸ ಟ್ರಸ್ಟ್‌ನ ಪದಾಧಿಕಾರಿಗಳು, ಅರಣ್ಯ ಇಲಾಖೆಯ ಮಂಚಿಕೇರಿ ಮತ್ತು ಕಾತೂರ ವಲಯದ ಸಿಬ್ಬಂದಿ, ಚಿಪಗೇರಿ ಗ್ರಾಮದ ಹಿರಿಯರು ಭಾಗವಹಿಸಿದ್ದರು.

ಜನರ ಅಹವಾಲು ಕೇಳಿದ ಸಚಿವ ಮಂಕಾಳ ವೈದ್ಯ



ಭಟ್ಕಳದ ಸಚಿವರ ಕಾರ್ಯಾಲಯದಲ್ಲಿ ಸಚಿವ ಮಂಕಾಳ ವೈದ್ಯರು ಜನತಾ ದರ್ಶನ ನಡೆಸಿ ಜನರ ಅಹವಾಲು ಕೇಳಿದರು.

• **ಕನ್ನಡಪ್ರಭ ವಾರ್ತೆ** ಭಟ್ಕಳ

ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಅವರು ಭಾನುವಾರ ಸಂಜೆ ಪಟ್ಟಣದ ತಮ್ಮ ಕಚೇರಿಯಲ್ಲಿ ಜನತಾ ದರ್ಶನ ನಡೆಸಿ ಸಾರ್ವಜನಿಕರ ಅಹವಾಲು ಕೇಳಿದರು.

ತಾಲೂಕಿನ ಮೂಲೆ ಮೂಲೆಗಳಿಂದ ಜನರು ಆಗಮಿಸಿ ಸಚಿವರಿಗೆ ಮನವಿ ಸಲ್ಲಿಸಿದರು. ಜನರು ಕುಡಿಯುವ ನೀರು, ರಸ್ತೆ, ಸೇತುವೆ ಮುಂತಾದವುಗಳಿಗೆ ಮನವಿ ಸಲ್ಲಿಸಿದರು. ಕೆಲವರು ಶಿಕ್ಷಣ, ಅನಾರೋಗ್ಯಕ್ಕೆ ಸಹಾಯ, ಮದುವೆ ಮುಂತಾದ ಕಾರ್ಯಕ್ರಮಕ್ಕೆ ಸಚಿವರಿಂದ ಸಹಾಯ ಯಾಚಿಸಿದರು.

ಸಚಿವರು ಕೆಲವು ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ ದೊರಕಿಸಿಕೊಟ್ಟರು. ಇನ್ನು ಕೆಲ ಸಮಸ್ಯೆಗಳಿಗೆ ತಮ್ಮ ಆಪ್ತ ಸಹಾಯಕರಾದ ನಾಗೇಂದ್ರ ಮೊಗೇರ ಮತ್ತು ನಾಗರಾಜ ನಾಯ್ಕ ಅವರ ಬಳಿ ಸಂಬಂಧಪಟ್ಟ ಅಧಿಕಾರಿಗಳ ಜತೆ ಮಾತನಾಡಿ ಸಮಸ್ಯೆ ಬಗೆಹರಿಸಿಕೊಡುವಂತೆ ಸೂಚಿಸಿದರು. ಮದುವೆ, ಶಿಕ್ಷಣ, ಅನಾರೋಗ್ಯಕ್ಕೆ ಸಂಬಂಧಿಸಿದಂತೆ ಸಚಿವರು ಧನಸಹಾಯ ಮಾಡಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ, ಪ್ರಧಾನ ಕಾರ್ಯದರ್ಶಿ ಸುರೇಶ ನಾಯ್ಕ ಮುಂತಾದವರಿದ್ದರು.

ಕಾರವಾರ ಕೈಗಾ ಚತುಷ್ಪಥ ಪ್ರಸ್ತಾಪ, ಜನರಲ್ಲಿ ಆತಂಕ

• **ಕನ್ನಡಪ್ರಭ ವಾರ್ತೆ** ಕಾರವಾರ

■ ಕಾರವಾರ ತಾಲೂಕಿನ ಜನ ಕದಂಬ ನೌಕಾನೆಲೆಗಾಗಿ ಮತ್ತು ಕೈಗಾ ಅಣುಸ್ಥಾವರಕ್ಕಾಗಿ, ಈಗಾಗಲೇ ತಮ್ಮ ಆಸ್ತಿ-ಪಾಸ್ತಿಗಳನ್ನು ತ್ಯಾಗ ಮಾಡಿದ್ದಾರೆ.
■ ಕಾರವಾರ- ಕೈಗಾ ಚತುಷ್ಪಥದ ಯೋಜನೆಯಿಂದಾಗಿ ಇನ್ನಷ್ಟು ಕುಟುಂಬಗಳು ಸಂತ್ರಸ್ತರಾಗಬಹುದಾದ ಭಯ

ಕಾರವಾರ-ಇಳಕಲ್ ರಾಜ್ಯ ಹೆದ್ದಾರಿಯ ಭಾಗವಾಗಿರುವ ಕಾರವಾರ- ಕೈಗಾ ರಸ್ತೆಯನ್ನು ಚತುಷ್ಪಥವಾಗಿ ಪರಿವರ್ತಿಸುವ ಯೋಜನೆ ಪ್ರಸ್ತಾಪವಾಗಿರುವ ಸಂಗತಿ ರಸ್ತೆಯ ಇಕ್ಕೆಲಗಳಲ್ಲಿ ತಲೆತಲಾಂತರದಿಂದ ವಾಸಿಸುತ್ತಿರುವ 500ಕ್ಕೂ ಹೆಚ್ಚು ಕುಟುಂಬಗಳಿಗೆ ಆತಂಕವನ್ನು ಸೃಷ್ಟಿಸಿದೆ ಎಂದು ಕಾರವಾರ-ಕೈಗಾ ಚತುಷ್ಪಥ ನಿರ್ಮಾಣ ವಿರೋಧಿ ಸಮಿತಿ ತಿಳಿಸಿದೆ.

ರಾಷ್ಟ್ರಹಿತವನ್ನು ಗಮನದಲ್ಲಿಟ್ಟುಕೊಂಡು ಕಾರವಾರ ತಾಲೂಕಿನ ಜನ ಕದಂಬ ನೌಕಾನೆಲೆಗಾಗಿ ಮತ್ತು ಕೈಗಾ ಅಣುಸ್ಥಾವರಕ್ಕಾಗಿ, ಈಗಾಗಲೇ ತಮ್ಮ ಆಸ್ತಿ-ಪಾಸ್ತಿಗಳನ್ನು ತ್ಯಾಗ ಮಾಡಿದ್ದಾರೆ. ಆ ನೋವು ಹಸಿರಾಗಿರುವಾಗಲೇ, ಕಾರವಾರ-ಕೈಗಾ ಚತುಷ್ಪಥದ ಯೋಜನೆಯಿಂದಾಗಿ ಇನ್ನಷ್ಟು ಕುಟುಂಬಗಳು ಸಂತ್ರಸ್ಥರಾಗಬಹುದಾದ ಭಯ ನಗರದ ಜನರನ್ನು ಕಾಡುತ್ತಿದೆ. ಕಾರವಾರ ನಗರವು ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವಿನ ಇಕ್ಕಟ್ಟಾದ ಸ್ಥಳದಲ್ಲಿ ನಿರ್ಮಾಣಗೊಂಡಿದ್ದು, ಈಗಾಗಲೇ ಅದು ಸ್ಥಳಾಭಾವದಿಂದ ಬಳಲುತ್ತಿದೆ. ಜೊತೆಯಲ್ಲಿ ಕೈಗಾ ಮತ್ತು ನೌಕಾನೆಲೆಗಳ ಅನುಷ್ಠಾನಕ್ಕಾಗಿ ಮತ್ತು ನಿರ್ವಹಣೆಗಾಗಿ ಸಾವಿರಾರು ಜನರು ದೇಶದ ವಿವಿಧೆಡೆಯಿಂದ ಕಾರವಾರಕ್ಕೆ ಆಗಮಿಸಿದ್ದು, ಸ್ಥಳಾಭಾವದ ಸಮಸ್ಯೆಯು ಸ್ವಾಭಾವಿಕವಾಗಿ ಇನ್ನೂ ತೀವ್ರಗೊಂಡಿದೆ. ವಸ್ತುಸ್ಥಿತಿ ಹೀಗಿರುವಾಗ, ಚತುಷ್ಪಥ ನಿರ್ಮಾಣದಿಂದ ಈ ಸಮಸ್ಯೆ ಇನ್ನೂ ಗಂಭೀರ ಸ್ವರೂಪವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಈ ಯೋಜನೆಯಿಂದಾಗಿ, ಹಿಂದಿನಿಂದ ವಿವಿಧ ಉದ್ಯೋಗಗಳನ್ನು ನಡೆಸಿಕೊಂಡು ಬರುತ್ತಿರುವ ಜನ ತಮ್ಮ ಉದ್ಯೋಗಗಳನ್ನು ಕಳೆದುಕೊಂಡು ನಿರ್ಗತಿಕರಾಗುವ ಮತ್ತು ನಿರುದ್ಯೋಗಿಗಳಾಗುವ ಸಾಧ್ಯತೆ ಇದೆ. ಮುಂದಿನ ಪೀಳಿಗೆಯವರಿಗೆ ಯಾವುದೇ ಹೊಸ ಉದ್ಯೋಗಕ್ಕೂ ಅವಕಾಶವಿಲ್ಲದಂತಾಗುತ್ತದೆ. ಈ ಚತುಷ್ಪಥ ಕೈಗಾ ಅಣುಸ್ಥಾವರಕ್ಕೆ ಸಾಮಗ್ರಿಗಳನ್ನು ಮತ್ತು ಯಂತ್ರಗಳನ್ನು ಸಾಗಿಸುವ ಉದ್ದೇಶ ಹೊಂದಿರುವುದರಿಂದ, ಅದು ನಿರ್ಬಂಧ ವಲಯವಾಗುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು.

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ಕಡವಾಡದಲ್ಲಿ ಜಿನ್ನಿಂಗ ಫ್ಯಾಕ್ಟರಿ (ಹತ್ತಿಯಿಂದ ಬೀಜ ಮತ್ತು ಕಸವನ್ನು ಬೇರ್ಪಡಿಸುವ ಕಾರ್ಖಾನೆ) ಸ್ಥಾಪಿಸಿದಾಗ, ಹುಬ್ಬಳ್ಳಿ ಭಾಗದಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಲು, ಅಮದಳ್ಳಿಯಿಂದ ಕಡವಾಡದ ವರೆಗೆ, ಊರಿನಿಂದ ಹೊರಗೆ ಹೆದ್ದಾರಿ ರಚಿಸಿ, ಕಾರವಾರದ ಜನತೆಗೆ ತೊಂದರೆಯಾಗದಂತೆ ನೋಡಿಕೊಂಡಿದ್ದು ಈಗ ಇತಿಹಾಸ.

ಈಚೆಗೆ ಗೋವಾದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಸಂದರ್ಭದಲ್ಲಿ, ಮಾರ್ಗದನಡುವಿನಯಾವಊರುಗಳಿಗೂ ಬಾಧೆಯಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದರು. ಇದೇ ರೀತಿಯಲ್ಲಿ ಕಾರವಾರದಲ್ಲೂ ಅಲ್ಲಿನ ನಿವಾಸಿಗಳಿಗೆ ಯಾವುದೇ ತೊಂದರೆಯಾಗದಂತೆ ಪರ್ಯಾಯ ಮಾರ್ಗ ರಚಿಸಬಹುದಲ್ಲವೇ ಎಂದು ಕಾರವಾರ-ಕೈಗಾ ರಸ್ತೆಯ ಇಕ್ಕೆಲಗಳಲ್ಲಿ ವಾಸಿಸುತ್ತಿರುವ ಜನರ ಆಗ್ರಹವಾಗಿದೆ. ಇದು ಕೇವಲ ಈ ಜನರ ಸಮಸ್ಯೆ ಅಲ್ಲ, ಆದರೆ ಇಡೀ ಕಾರವಾರ ಜನರ ಸಮಸ್ಯೆಯಾಗಿದೆ ಎಂದು ಕಾರವಾರ-ಕೈಗಾ ಚತುಷ್ಪಥ ನಿರ್ಮಾಣ ವಿರೋಧಿಸಮಿತಿಅಧ್ಯಕ್ಷವಿಜಯಕುಮಾರ್ ಆರ್.ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆದ್ದಾರಿ ಸಮಸ್ಯೆ ಬಗೆಹರಿಸಲು ಆಗ್ರಹ



ಗಟಾರ ಕಾಮಗಾರಿ ಮಾಡಿಸುವಂತೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಸ್ಥಳೀಯರು ಒತ್ತಾಯಿಸಿದರು.

• **ಕನ್ನಡಪ್ರಭ ವಾರ್ತೆ** ಭಟ್ಕಳ

ಪಟ್ಟಣದ ಮೂಡಭಟ್ಕಳ ಬೈಪಾಸ್‌ನಲ್ಲಿ ಸಮರ್ಪಕ ಗಟಾರಮಾಡದೇ ಹೆದ್ದಾರಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಲ್ಲಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತರಾಮ ಭಟ್ಕಳ ಮತ್ತಿತರರು ದೂರಿ, ಮಳೆಗಾಲ ಆರಂಭ ಆಗುವುದರೊಳಗೆ ಗಟಾರ ಕಾಮಗಾರಿ ಆರಂಭಿಸುವಂತೆ ಒತ್ತಾಯಿಸಿದರು. ಮಂಗಳೂರಿಗೆ ತೆರಳುತ್ತಿದ್ದ ಸಂಸದ ಕಾಗೇರಿ ಅವರಿಗೆ ಹೆದ್ದಾರಿ ಕಾಮಗಾರಿಯ ಸಮಸ್ಯೆ ಬಗ್ಗೆ ತಿಳಿಸಿದ ಅವರು, ಮೂಡಭಟ್ಕಳದಲ್ಲಿ ಇನ್ನೂ ಗಟಾರ ಕಾಮಗಾರಿ ಕೈಗೆತ್ತಿಕೊಂಡಿಲ್ಲ. ಗಟಾರ ಮಾಡದೇ ಹೆದ್ದಾರಿ ಕಾಮಗಾರಿ ಮಾಡಿದರೆ ಮಳೆಗಾಲದಲ್ಲಿ ಜನರು ತೊಂದರೆ ಅನುಭವಿಸಬೇಕಾಗುತ್ತದೆ. ಮಳೆ ನೀರು ಮನೆಗಳಿಗೆ ನುಗ್ಗಲಿದೆ. ಹಿಂದೊಮ್ಮೆ ಮಹಾಮಳೆಗೆ ಮಳೆ ನೀರು ಮನೆಗಳಿಗೆ ನುಗ್ಗಿ ಜನರು ತೊಂದರೆ ಅನುಭವಿಸಿದ್ದಾರೆ. ಹೀಗಾಗಿ ಆದಷ್ಟು ಬೇಗ ಗಟಾರ ಕಾಮಗಾರಿ ಮಾಡುವಂತೆ ಒತ್ತಾಯಿಸಿದರು. ಉಪಸ್ಥಿತರಿದ್ದ ಶಾಂತರಾಮ ಭಟ್ಕಳ ಅವರು ಹೆದ್ದಾರಿ ಸಮಸ್ಯೆ ಬಗ್ಗೆ ತಿಳಿಸಿದರು. ಸಂಸದ ಕಾಗೇರಿ ಅವರು ಈ ಬಗ್ಗೆ ಅಧಿಕಾರಿಗಳ ಜತೆ ಮಾತನಾಡುವುದಾಗಿ ಹೇಳಿದರು. ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನಾಯ್ಕ, ಭಾಸ್ಕರ ದೈಮನೆ, ಸ್ಥಳೀಯರಾದ ರಮೇಶ ನಾಯ್ಕ, ರಾಮದಾಸ ನಾಯ್ಕ ಮುಂತಾದವರಿದ್ದರು.

ಬೇಸಿಗೆ ಶಿಬಿರ ಸಂಪನ್ನ

• **ಕನ್ನಡಪ್ರಭ ವಾರ್ತೆ** ಶಿರಸಿ

ಇಸಳೂರು ಗ್ರಾಮ ಪಂಚಾಯಿತಿ ಸಭಾಭವನದಲ್ಲಿ ಶನಿವಾರ ಬೇಸಿಗೆ ಶಿಬಿರ 2026ರ ಸಮಾರೋಪ ಸಮಾರಂಭ ಜರುಗಿತು. ಈ ವೇಳೆ ಮಕ್ಕಳು ಬೇಸಿಗೆ ಶಿಬಿರದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು, ಶಿಬಿರದ ವರದಿಯನ್ನು ಮಂಡಿಸಿದರು. ಶಿಬಿರದಲ್ಲಿ ವಿವಿಧ ಸ್ಪರ್ಧೆಗಳ ಬಹುಮಾನಗಳ ವಿತರಣೆ ಮತ್ತು ಪ್ರಮಾಣ ಪತ್ರವನ್ನು ಗ್ರಾಮ ಪಂಚಾಯಿತಿಯಿಂದ ನೀಡಲಾಯಿತು. ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಸುಗಮಗಾರರಿಗೆ ನೆನಪಿನ ಮತ್ತು ಪ್ರಮಾಣ ಪತ್ರವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಇಸಳೂರು ಗ್ರಾಪಂ ಆಡಳಿತ ಅಧಿಕಾರಿ ಗಣೇಶ ಹೆಗಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯವೀರ ಭಟ್, ಕಾರ್ಯದರ್ಶಿ ವೆಂಕಟ್ರಮಣ ಶೆಟ್ಟಿ, ಕಲ್ಪನಾ ಪಿ. ಹೆಗಡೆ, ಶೋಭಾ ಡಿ. ಕೊಲ್ಲುರಿ, ಮಧುರಾ ನಾಯ್ಕ, ಭಾಗ್ಯ ಹಿರೇಮಠ, ಲಲಿತಾ ಎಸ್.ಕೆ. ಪಂಚಾಯತ್ ಸಿಬ್ಬಂದಿ ಹಾಗೂ ಪಾಲಕರು ಉಪಸ್ಥಿತರಿದ್ದರು.



ಬೇಸಿಗೆ ಸಮಾರೋಪದ ಸಮಾರಂಭ ನಡೆಯಿತು.

ಸಂವಾದ | ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿಗೆ ಉಪವಿಭಾಗಾಧಿಕಾರಿ ಭೇಟಿ

ಜೀವನದಲ್ಲಿ ಯಶಸ್ಸು ಪಡೆಯಲು ಆತ್ಮವಿಶ್ವಾಸ, ಧೈರ್ಯ ಅಗತ್ಯ

• **ಕನ್ನಡಪ್ರಭ ವಾರ್ತೆ** ಹಳಿಯಾಳ



ಹಳಿಯಾಳ ಪಟ್ಟಣದ ಕೆನರಾ ಬ್ಯಾಂಕ್ ದೇಶಪಾಂಡೆ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆಗೆ ಉಪವಿಭಾಗಾಧಿಕಾರಿ ಪಿ. ಶ್ರವಣಕುಮಾರ ಅವರು ಭೇಟಿ ನೀಡಿ ಶಿಬಿರಾರ್ಥಿಗಳು ಹಾಗೂ ತರಬೇತುದಾರರೊಂದಿಗೆ ಸಂವಾದ ನಡೆಸಿದರು.

ನಾನೂ ನನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಸಾಕಷ್ಟು ಕಷ್ಟಪಟ್ಟು ಕಲಿತಿರುವ ಪರಿಣಾಮದಿಂದಾಗಿ ಈ ಹುದ್ದೆಗೆ ಬಂದಿದ್ದೇನೆ. ಆದುದರಿಂದ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಶಿಬಿರಾರ್ಥಿಗಳು ಕೌಶಲ್ಯಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಸ್ವಉದ್ಯೋಗದ ಮೂಲಕ ಆತ್ಮನಿರ್ಭರರಾಗಬೇಕು.
• **ಪಿ. ಶ್ರವಣಕುಮಾರ** ಉಪವಿಭಾಗಾಧಿಕಾರಿ

ಯಶಸ್ಸಿಗೆ ಯಾವತ್ತೂ ಶಾರ್ಟ್‌ಕಟ್ ಇಲ್ಲ, ಶಾರ್ಟ್‌ಕಟ್ ಮೂಲಕ ಪಡೆದ ಯಶಸ್ಸು ಯಾವತ್ತೂ ಶಾಶ್ವತವಲ್ಲ. ಜೀವನದಲ್ಲಿ ಯಶಸ್ಸು ಪಡೆಯಲು ಆತ್ಮವಿಶ್ವಾಸ, ಧೈರ್ಯ ಹಾಗೂ ನಿರಂತರ ಪರಿಶ್ರಮ ಅಗತ್ಯವಾಗಿದ್ದು, ಯಶಸ್ಸು ಒಮ್ಮಿಂದೊಮ್ಮೆಲೆಯಾಗಲಿ, ತಕ್ಷಣವಾಗಿಯೂ ಸಿಗುವುದಿಲ್ಲ ಎಂದು ಉತ್ತರಕನ್ನಡ ಜಿಲ್ಲೆಯ ಕುಮಟಾ ಹಾಗೂ ಕಾರವಾರ ಉಪವಿಭಾಗಾಧಿಕಾರಿ ಪಿ. ಶ್ರವಣಕುಮಾರ ಹೇಳಿದರು.

ಪಟ್ಟಣದ ಕೆನರಾ ಬ್ಯಾಂಕ್ ದೇಶಪಾಂಡೆ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆಗೆ ಶನಿವಾರ ಭೇಟಿ ನೀಡಿದ ಅವರು ಸಂಸ್ಥೆಯ ವಿವಿಧ ತರಬೇತಿಯಲ್ಲಿ ಪಾಲ್ಗೊಂಡಿರುವ ಶಿಬಿರಾರ್ಥಿಗಳನ್ನು ಹಾಗೂ ತರಬೇತುದಾರರನ್ನು ಉದ್ದೇಶಿಸಿ ಮಾತನಾಡಿದರು.

ಯಶಸ್ಸಿನ ಮಾರ್ಗ ಕಠಿಣ: ಯಶಸ್ಸಿನ ಹಾದಿಯು ಬಹಳ ಕಠಿಣವಾಗಿದೆ. ಯಶಸ್ಸು ಗಳಿಸಲು ಶಿಸ್ತು ಮತ್ತು ಕಠಿಣ ಪರಿಶ್ರಮ ಇರಬೇಕು ಎಂದ ಅವರು, ತಮ್ಮ ಜೀವನದ ಅನುಭವವವನ್ನು ಹಂಚಿಕೊಳ್ಳುತ್ತ ನಾನೂ ನನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಸಾಕಷ್ಟು ಕಷ್ಟಪಟ್ಟು ಕಲಿತಿರುವ ಪರಿಣಾಮದಿಂದಾಗಿ ಈ ಹುದ್ದೆಗೆ ಬಂದಿದ್ದೇನೆ. ಆದುದರಿಂದ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಶಿಬಿರಾರ್ಥಿಗಳು ಕೌಶಲ್ಯಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಸ್ವ ಉದ್ಯೋಗದ ಮೂಲಕ ಆತ್ಮನಿರ್ಭರರಾಗಬೇಕು ಎಂದು ಸಲಹೆ ನೀಡಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಇಡೀ ಸಂಸ್ಥೆಯ ವಿವಿಧ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿದ ಅವರು ಅಲ್ಲಿನ ಕಾರ್ಯಕ್ರಮಗಳನ್ನು ಹಾಗೂ ಚಟುವಟಿಕೆ ಸಮಗ್ರವಾಗಿ ಅವಲೋಕಿಸಿದರು. ಮೋಟಾರ್ ವೈಂಡಿಂಗ್ ತರಬೇತಿ ಹಾಗೂ ಕೃಷಿ ಆಧಾರಿತ ತರಬೇತಿ ಉದ್ಯಮಗಳ ವಿಭಾಗಗಳನ್ನು ವೀಕ್ಷಿಸಿದ ಅವರು ತರಬೇತಿಯಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿ ತರಬೇತಿಯ ಗುಣಮಟ್ಟ, ಕಲಿಕೆಯ ಅನುಭವ ಹಾಗೂ ಸ್ವ ಉದ್ಯೋಗ ಆರಂಭಿಸುವಲ್ಲಿ ಎದುರಾಗುವ ಸವಾಲುಗಳ ಕುರಿತು ಮಾಹಿತಿ ಕಲೆ ಹಾಕಿದರು. ಸಂಸ್ಥೆಯಲ್ಲಿ ನೀಡಲಾಗುವ ಊಟ ಮತ್ತು ವಸತಿ ವ್ಯವಸ್ಥೆ ಮತ್ತು ಪ್ರಾಯೋಗಿಕ ತರಬೇತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಪ್ರಕಾಶ ಪ್ರಭು ಅವರು 2004ರಿಂದ ಸಂಸ್ಥೆಯು ಈ ವರೆಗೂ ಸಾಗಿ ಬಂದ ಯಶಸ್ಸಿನ ಹಾದಿ, ಸಂಸ್ಥೆಯಲ್ಲಿ ನೀಡಲಾಗುವ ತರಬೇತಿಗಳು, ಗ್ರಾಮೀಣ ಭಾಗದ ಯುವಜನಾಂಗಕ್ಕೆ ಸ್ವಾವಲಂಬಿ ಬದುಕು ಸಾಗಿಸಲು ನೀಡಲಾಗುವ ತರಬೇತಿ ಮತ್ತು ಆರ್ಥಿಕ ಸೌಲಭ್ಯಗಳ ಬಗ್ಗೆ ವಿವರಿಸಿ, ಸಂಸ್ಥೆಯಲ್ಲಿ ತರಬೇತಿ ಪಡೆದು ಸಾಧನೆ ಮಾಡಿದ ಯಶಸ್ವಿ ಯುವಕರು ಮತ್ತು ಮಹಿಳೆಯರು ಹೇಗೆ ಸ್ವ ಉದ್ಯೋಗ ಆರಂಭಿಸಿ ಯಶಸ್ಸು ಗಳಿಸಿದರು ಎಂಬುದನ್ನು ಉದಾಹರಣೆಗಳ ಸಮೇತ ವಿವರಿಸಿದರು.

ಸಂಯೋಜನಾಧಿಕಾರಿ ವಿನಾಯಕ ಚೌಹಾಣ್ ತರಬೇತಿಗಳು ಹಾಗೂ ಸಂಸ್ಥೆಯಲ್ಲಿ ಮುಂದೆ ಕೈಗೊಳ್ಳಲಾಗುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಹೃದಯಾಘಾತದಿಂದ ಡಿಗ್ಗಿ ಆಸ್ಪತ್ರೆ ವೈದ್ಯ ಲೆನ್ಸರ್ ಲೋಬೋ ನಿಧನ



ಕಾರವಾರ: ಜೋಯಿಡಾ ತಾಲೂಕಿನ ದಟ್ಟ ಅಡವಿ ಡಿಗ್ಗಿ ಆಸ್ಪತ್ರೆಯ ವೈದ್ಯ ಡಾ. ಲೆನ್ಸರ್ ಲೋಬೋ (38) ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಗುರುವಾರ ಡಿಗ್ಗಿಯಲ್ಲೇ ಅವರಿಗೆ ಎದೆನೋವು ಕಾಣಿಸಿಕೊಂಡಿದೆ. ಆದರೆ, ತಾಲೂಕು ಆಸ್ಪತ್ರೆಗೆ ಬರಲು ಆ್ಯಂಬುಲೆನ್ಸ್ ವ್ಯವಸ್ಥೆ ಇರಲಿಲ್ಲ. ಬೇರೆ ವಾಹನ, ಸಂಪರ್ಕ ವ್ಯವಸ್ಥೆಯೂ ಇರಲಿಲ್ಲ. ಶುಕ್ರವಾರ ಸ್ಕೊಡ್‌ವೇಸ್ ವಾಹನದಲ್ಲಿ ತಾಲೂಕು ಆಸ್ಪತ್ರೆಗೆ ಕರೆತರಲಾಯಿತು. ಆಸ್ಪತ್ರೆ ಒಳಗಡೆ ಬರುತ್ತಿದ್ದಂತೆ ತೀವ್ರ ಹೃದಯಾಘಾತವಾಗಿ ಮೃತಪಟ್ಟರು. ಶನಿವಾರ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೂಲತಃ ಉಡುಪಿ ಜಿಲ್ಲೆಯ ಬ್ರಹ್ಮಾವರದವರಾದ ಡಾ. ಲೆನ್ಸರ್‌ಲೋಬೋ ಡಿಗ್ಗಿ ವೈದ್ಯರೆಂದೆ ಹೆಸರಾಗಿದ್ದರು. ಅವರು ಮೂರು ವರ್ಷಗಳಿಂದ ಡಿಗ್ಗಿಯಲ್ಲೇ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಜನತೆಗೆ ಆರೋಗ್ಯ ಭಾಗ್ಯ ಕರುಣಿಸಿದ್ದರು. ಆದರೆ, ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಲಭ್ಯವಾಗದೆ ವೈದ್ಯರೇ ಮೃತಪಟ್ಟಿರುವುದು ದುರ್ದೈವದ ಸಂಗತಿಯಾಗಿದೆ. ಆರೋಗ್ಯಬಂಧು ಯೋಜನೆಯಡಿ ಡಿಗ್ಗಿ ಆಸ್ಪತ್ರೆಯಲ್ಲಿ ಸ್ಕೊಡ್‌ವೇಸ್ ಸಂಸ್ಥೆ ಮೂಲಕ ವೈದ್ಯಕೀಯ ಸೇವೆ ನೀಡುತ್ತಿದ್ದ ಅವರು ಜನಪ್ರಿಯ ವೈದ್ಯರಾಗಿದ್ದರು. ಕೇವಲ ಡಿಗ್ಗಿ ಸುತ್ತಮುತ್ತಲಿನ ಜನತೆಯಷ್ಟೇ ಅಲ್ಲ. ಗೋವಾದ ಜನತೆ ಕೂಡ ಡಿಗ್ಗಿಗೆ ಬಂದು ಇವರಲ್ಲಿ ಚಿಕಿತ್ಸೆಪಡೆಯುತ್ತಿದ್ದರು. ವೈದ್ಯರು ಮೃತಪಟ್ಟಿರುವುದು ತೀವ್ರ ಆಘಾತ ಉಂಟುಮಾಡಿದೆ. ಡಿಗ್ಗಿಯಂತಹ ಪ್ರದೇಶದಲ್ಲಿ ಕೆಲಸ ಮಾಡುವ ವೈದ್ಯರು, ಆರೋಗ್ಯ ಸಿಬ್ಬಂದಿಗೆ ಸರ್ಕಾರ ರಕ್ಷಣೆ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವವರಿಗೆ ಭದ್ರತೆ ನೀಡಬೇಕಾಗಿದೆ ಎಂದು ಸ್ಕೊಡ್‌ವೇಸ್ ಕಾರ್ಯನಿರ್ವಾಹಕ ನಿರ್ದೇಶಕ ವೆಂಕಟೇಶ್ ನಾಯ್ಕ ಆಗ್ರಹಿಸಿದ್ದಾರೆ.